ಶ್ರೀ ಎನ್. ಜಿ. ನಾಯಕ್.-- ಹತ್ತು ಸಾವಿರ ಎಕರೆಗೆ ಒಬ್ಬ ಅರಣ್ಯ ರಕ್ಷಕ ಇದ್ದಾರೆ. ಅದರಿಂದ, ಕೊಡಲೇ ಅರಣ್ಯ ರಕ್ಷಕರನ್ನು ನೇಮಕ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ

ಶ್ರೀ ಬಿ. ಎ. ಜೀವಿಜಯ.-- ಅದನ್ನು ನಾನು ಮಾಡುತ್ತೇನೆ.

283 (825) ಸದಸ್ಯರು ಗೈರುಹಾಜರಿ.

ಹೊಸದುರ್ಗ ತಾಲ್ಲೂಕಿನಲ್ಲಿ ಯಾವುದೇ ರಸ್ತೆಗಳಿಲ್ಲದ ಹಳ್ಳಿಗಳ ಕುರಿತು

284 (847) ಶ್ರೀ ಬಸಪ್ಪ (ಹೊಸದುರ್ಗ).-- ನಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ --

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಯಾವುದೇ ಮಾದರಿ ರಸ್ತೆಗಳಿಲ್ಲದ ಹಳ್ಳಿಗಳ ಸಂಖ್ಯೆ ಎಷ್ಟು ;

ಆ) ಈ ಮೇಲೆ ಸೂಚಿಸಿದ ಉದ್ದಿಶ್ಯಕ್ಕಾಗಿ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಲು ಎಂ.ಎನ್.ಪಿ ಯೋಜನೆಯಡಿಯಲ್ಲಿ ವಿಶೇಷ ಅನುದಾನವನ್ನು ಪಾಲಿಸಲು ಸರ್ಕಾರವು ಯೋಜಿಸುತ್ತಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).--

ಅ) 32

ಆ) ಕನಿಷ್ಟ ಅವಶ್ಯಕತೆ ಯೋಜನೆ ಪ್ರಕಾರ 1000 ಕ್ಕಿಂತ ಹೆಚ್ಚು ಜನ ಸಂಖ್ಯೆ ಇರುವ ಹಳ್ಳಿಗಳು ಮಾತ್ರ ಈ ಯೋಜನೆಯ ವ್ಯಾಪ್ತಿಯಲ್ಲಿ ಬರುತ್ತವೆ ಅದರಂತೆ ಈ ತಾಲ್ಲೂಕಿನ ರಸ್ತೆಯಿಲ್ಲದಿರುವ ಮೇಲ್ಕಂಡ 32 ಹಳ್ಳಿಗಳ ಪೈಕಿ ಒಂದು ಗ್ರಾಮ (ಕುದೂರು) ಮಾತ್ರ ಈ ಯೋಜನೆಯ ವ್ಯಾಪ್ತಿಯಲ್ಲಿ ಬರುತ್ತದೆ. ಆರ್ಥಿಕ ಲಭ್ಯತೆಯನ್ನು ಅನುಸರಿಸಿ ಈ ಕಾಮಗಾರಿಯನ್ನು ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು. ಅಧ್ಯಕ್ಷರೆ, ಈ ವಿಷಯದಲ್ಲಿ ಬಂದು ವಿವರಣೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ ಮಿನಿಮುಮ್ ನೀಡ್ಸ್ ಪ್ರೋಗ್ರಾಮ್‌ನಲ್ಲಿ ಒಂದು ಸಾವಿರ ಪಾಪ್ಯುಲೇಷನ್ ಇರತಕ್ಕ, ಅಥವಾ ಅದಕ್ಕಿಂತಲೂ ಮೇಲೆ ಇರತಕ್ಕ ಸಂಖ್ಯೆಯ ಹಳ್ಳಿಗಳಿಗೆ ಮಾತ್ರ ರಸ್ತೆ ಮಾಡತಕ್ಕದ್ದು ಸರ್ಕಾರದ ನಿರ್ಣಯ ಇದೆ ಆ ಪ್ರಕಾರ 32 ಹಳ್ಳಿಗಳ ಪೈಕಿ ಒಂದೇ ಒಂದು ಹಳ್ಳಿ ಮಾತ್ರ ಒಂದು ಸಾವಿರ ಜನಸಂಖ್ಯೆಗಳಿಗಿಂತಲೂ ಹೆಚ್ಚು ಇರುವುದು ಕಂಡು ಬರುತ್ತದೆ. ಇವುಗಳನ್ನು ಮನಗಂಡು ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚು ಸೌಲಭ್ಯ ಕೊಡಬೇಕೆಂಬ ದೃಷ್ಟಿಯಿಂದ ಬಜೆಟ್ ಸ್ವೀಚ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದ್ದಾರೆ. ರಾಜ್ಯದ ಎಲ್ಲಾ ಹಳ್ಳಿಗಳಿಗೂ ರಸ್ತೆಯನ್ನು ಒದಗಿಸಬೇಕೆಂದು ರಾಷ್ಟ್ರೀಯ ಹೆದ್ದಾರಿ, ಹಳ್ಳಿಯ ಹೆದ್ದಾರಿ ಎನ್ನುತಕ್ಕ ಹೊಸ ಕಾರ್ಯಕ್ರಮ ಘೋಷಣೆ ಮಾಡಿದ್ದಾರೆ. ಇದರ ವ್ಯಾಪ್ತಿಯಲ್ಲಿ ಎರಡು ವರ್ಷಗಳಲ್ಲಿ ಈ ರಾಜ್ಯದ ಎಲ್ಲಾ ಹಳ್ಳಿಗಳಿಗೂ ರಸ್ತೆಯನ್ನು ಸಂಪೂರ್ಣವಾಗಿ ಮಾಡಿಕೊಡುತ್ತೇವೆ. ಅದಕ್ಕೆ 25 ಕೋಟಿ ರೂಪಾಯಿ ಹಣ ಖರ್ಚಾಗುತ್ತದೆ. ಜನತಾ ಸರ್ಕಾರದ ಕಾರ್ಯಕ್ರಮ ಎರಡು ವರ್ಷದಲ್ಲಿ ಎಲ್ಲಾ ಹಳ್ಳಿಗಳಿಗೂ ರಸ್ತೆಗಳನ್ನು ಮಾಡಿಕೊಡಬೇಕು ಎನ್ನುವುದು ಇದೆ ಈಗ ತಾವು ಹೇಳಿರತಕ್ಕ 32 ಹಳ್ಳಿಗಳಿಗೂ ಎರಡು ವರ್ಷದಲ್ಲಿ ಮಾಡಿ ಮುಗಿಸಿಕೊಡುತ್ತೇವೆ.

ಶ್ರೀ ಜಿ. ಬಸಪ್ಪ.-- ಮತ್ತೂಡ್ ಮತ್ತು ಶ್ರೀ ರಾಮಪ್ಪರದ ಹಳ್ಳಿಗಳಿಗೆ ರಸ್ತೆ ಮಾಡಿಸಿದರೆ ಅದರಿಂದ ಸುಮಾರು 10-12 ಹಳ್ಳಿಗಳಿಗೆ ಅನುಕೂಲವಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ -- 32 ಹಳ್ಳಿಗಳಲ್ಲಿ ಮೊದಲು ತಾವು ಯಾವ ಯಾವ ಹಳ್ಳಿಗಳಿಗೆ ಪ್ರಾತಿನಿಧ್ಯ ಕೊಡಬೇಕೆಂದು ಹೇಳುತ್ತೀರಾ ಅದೇ ಪ್ರಕಾರ ಮಾಡೋಣ.

272 (432) ಸದಸ್ಯರು ಗೈರು ಹಾಜರು.

ನುಲೆನಾಡು ಪ್ರದೇಶದಲ್ಲಿ ಬೆಳೆದು ನಿಂತ ಬೆಳೆಗಳನ್ನು ವನ್ಯ ಮೃಗಗಳಿಂದ ರಕ್ಷಿಸುವುದು.

278 (812) ಶ್ರೀ ಪಿ.ತಿಪ್ಪಯ್ಯ (ಮೂಡಿಗೆರೆ).--ನಾನ್ಯ ಅರಣ್ಯ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.--

ಅ) ವನ್ಯ ಜೀವಿಗಳಿಂದ ನುಲೆನಾಡಿನಲ್ಲಿರುವ ಹೊಲಗದ್ದೆಗಳಲ್ಲಿ ನಿಂತ ಸ್ಥಿರಿಗೆ ಹಾನಿಯಾಗುತ್ತಿದ್ದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ತೊಂದರೆ ನಿವಾರಿಸಲು ರೈತರಿಗೆ ಯಾವ ರಕ್ಷಣೆಯನ್ನು ಕೊಡಲಾಗಿದೆ ?

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).--ಅ) ಬಂದಿದೆ.

ಅ) ಸರಕಾರದ ಈಗಿರುವ ಆಜ್ಞೆಯ ಪ್ರಕಾರ ವನ್ಯಜೀವಿಗಳಿಂದ ಹಾನಿಗೊಂಡ ಬೆಳೆಗಳಿಗೆ ಸಂಬಂಧಪಟ್ಟ ರೈತರುಗಳಿಗೆ ಪರಿಹಾರವನ್ನು ಕೊಡಲಾಗುತ್ತಿದೆ.

ವನ್ಯ ಪ್ರಾಣಿಗಳ ಹಾವಳಿ ಹೆಚ್ಚಾದ ಕಡೆಗಳಲ್ಲಿ ಅವನ್ನು ಕಾಡಿಗೆ ದೂರ ಅಟ್ಟಲು ಅಲ್ಲಲ್ಲಿ ಅರಣ್ಯ ರಕ್ಷಕರನ್ನು ಕೂಡಾ ನೇಮಿಸಿಕೊಳಲಾಗಿದೆ.

ಶ್ರೀ ಪಿ. ತಿಪ್ಪಯ್ಯ.-- ವನ್ಯಜೀವಿಗಳಿಂದ ಹಾನಿಗೊಂಡ ಬೆಳೆಗಳಿಗೆ ಸಂಬಂಧಪಟ್ಟ ಹಾಗೆ ರೈತರಿಗೆ ಪರಿಹಾರ ಕೊಡಲಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಅಷ್ಟು ಮಾಡಿದರೆ ಸಾಲದು, ವನ್ಯ ಜೀವಿಗಳು ಬರದಂತೆ ಮುಳ್ಳು ಬೇಲಿ ಹಾಕುವಂಥ ವ್ಯವಸ್ಥೆಯಾಗಬೇಕು. ಶಾಶ್ವತವಾಗಿ ಪರಿಹಾರವಾಗುವಂತೆ ಕಾರ್ಯಕ್ರಮ ತೆಗೆದುಕೊಳ್ಳುವ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರಿ ಬಿ. ಎ. ಜೀವಿಜಯ.--ಅಧ್ಯಕ್ಷರೇ, ಈ ಪ್ರಶ್ನೆಗೆ ಅನೇಕಬಾರಿ ಉತ್ತರ ಕೊಟ್ಟಿದ್ದೇನೆ. ಪರಿಹಾರ ಕೊಡತಕ್ಕದ್ದು ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಅವರಿಗೆ ಅಧಿಕಾರ ಇತ್ತು. ಈಗ ಅದನ್ನು ಡೆಪ್ಯುಟಿ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಅವರಿಗೆ ಕೊಟ್ಟಿದ್ದೇವೆ. ನೊದಲು ತೋಟಗಾರಿಕೆ ಇಲಾಖೆಯ ಸಲಹೆ ಪಡೆಯುತ್ತಿದ್ದೆವು. ಈಗ ಅರಣ್ಯ ಇಲಾಖೆಯವರ ಫಸಲು ನಾಶವಾದ ತಕ್ಷಣ ಪರಿಹಾರ ಕೊಡುತ್ತಾರೆ. ಪರಿಹಾರವನ್ನು ಆದಷ್ಟು ಜಾಗ್ರತೆ ಕೊಡುತ್ತಿದ್ದಾರೆ.

ಶ್ರೀ ಪಿ. ತಿಪ್ಪಯ್ಯ.--ಪ್ರಾಣಿಗಳು ಬರುತ್ತವೆ, ಕಬ್ಬು ಬೆಳೆ ನಾಶಮಾಡಿ ಹೋಗುತ್ತವೆ. ಹತ್ತು ಸಾವಿರ ರೂಪಾಯಿ ನಷ್ಟವಾದರೆ ಐದುನೂರು ರೂಪಾಯಿ ಪರಿಹಾರ ಕೊಡುತ್ತಾರೆ ಇದರಿಂದ ಏನು ಪ್ರಯೋಜನವಾಗುತ್ತದೆ.

ಶ್ರೀ ಜೀವಿಜಯ.-- ಅನೆಗೆ ಬೇಲಿ ಹಾಕಿ ತಡೆಯಲಿಕ್ಕೆ ಸಾಧ್ಯವೇ ಮಾನ್ಯ ಸದಸ್ಯರೇ ಯೋಚನೆ ಮಾಡಬೇಕು. ಅದಕ್ಕೆ ಕಂದಕವನ್ನು ಮಾಡುತ್ತಿದ್ದೇವೆ.

ಅಧ್ಯಕ್ಷರು.--ಪ್ರಶ್ನೋತ್ತರಗಳು ಮುಗಿದವು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಿಂತಾಮಣಿ ತಾಲ್ಲೂಕಿನ ಮುರುಗೆಮಲ್ಲಾ ಹೋಬಳಿಯ ಶ್ರೀ ಎ. ಕೆ. ನಾರಾಯಣಪ್ಪನವರ ಜಮೀನಿನಲ್ಲಿ ಹುಣಸೇ ಮರಗಳಿಗೆ ಮೂಲ್ಕಿ ಮೌಲ್ಯ ನಿಗದಿಪಡಿಸುವುದು.

272 (432) ಶ್ರೀ ಚೌಡರೆಡ್ಡಿ (ಚಿಂತಾಮಣಿ).--ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ --

ಅ) ಚಿಂತಾಮಣಿ ತಾಲೂಕಿನ ತಹಶೀಲ್ದಾರ್‌ರವರ ಕಾರ್ಯಾಲಯದಿಂದ ದಿನಾಂಕ 21-9-1961 ರಲ್ಲಿ ಎಲ್. ಎನ್. ಡಿ. 2021 : 60-61ರ ಮೇರೆಗೆ 2 ಎಕರೆ ಜಮೀನು ಚಿಂತಾಮಣಿ ತಾಲ್ಲೂಕು ಮುರಗಮಲ್ಲಾ ಹೋಬಳಿ ದಿಗವಕೋಟೆ ಗ್ರಾಮದ ಹರಿಜನ ಎ. ಕೆ. ನಾರಾಯಣಪ್ಪ ಬಿನ್ ನರಸಪ್ಪ ಎಂಬುವರಿಗೆ ಮಂಜೂರಾಗಿದ್ದು ಸದರಿ ಜಮೀನಿನಲ್ಲಿ 3 ಹುಣಸೇ ಮರಗಳಿಗೆ ಮೂಲ್ಕಿ ವಿಧಿಸುವಂತೆ ಪಿ. ಡಿ. ಆರ್. ನಂ. 5 : 589 ರಂತೆ ಜಿಲ್ಲಾ ಅರಣ್ಯ ಇಲಾಖೆಯ ವಿಭಾಗಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡಿರುವ ಪತ್ರದ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ;

ಆ) ಈ ಬಗ್ಗೆ ಅನೇಕ ಸಾರಿ ತಹಶೀಲ್ದಾರ್‌ರವರ ಕಾರ್ಯಾಲಯದಿಂದ ಜಿಲ್ಲಾ ಅರಣ್ಯ ಅಧಿಕಾರಿಗಳವರಿಗೆ ಪತ್ರಗಳನ್ನು ಬರೆದರೂ ಆ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು ;

ಇ) ಮೂಲ್ಕಿ ನಿಗದಿಪಡಿಸಲು ಕಾಲಾವಧಿಯನ್ನೇನಾದರೂ ನಿಗದಿಗೊಳಿಸಲಾಗಿದೆಯೇ ;

ಈ) ಪ್ರತಿವರ್ಷವು ಈ ಹುಣಸೇ ಮರಗಳನ್ನು ಇಲಾಖೆಯವರು ಹರಾಜು ಮಾಡುತ್ತಿರುವುದರಿಂದ ಈ ಬಡಜನರಿಗೆ ಅನ್ಯಾಯವಾಗುತ್ತಿರುವುದು ಈ ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಉ) ಪ್ರತಿವರ್ಷ ಹುಣಸೇ ಮರಗಳ ಪೋಷಣೆ ಮಾಡಿ ತನ್ನ ಜಮೀನುನಲ್ಲಿದ್ದ ಫಸಲು ಬರುವಾಗ ಅರಣ್ಯಾಧಿಕಾರಿಗಳು ಹರಾಜು ಹಾಕುತ್ತಿರುವುದನ್ನು ಸರ್ಕಾರದವರು ತಪ್ಪಿಸಿ ಮೂಲ್ಕಿ ವಿಧಿಸಲು ಅವಕಾಶ ಕಲ್ಪಿಸಿ ಕೊಡಲು ಕ್ರಮ ಕೈಗೊಳ್ಳುವರೇ ?

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).--